# ಮರುಕಳಿಸದೇ ಬಾಲ್ಯ..?

**ಬಾಲ್ಯದ ದಿನಗಳನ್ನು ನೆನಪಿಸುವುದರಲ್ಲೇ ಏನೋ ಖುಷಿ, ಸಂತೃಪ್ತಿ, ಸಮಾಧಾನ ಅಡಗಿದೆ. ಜೀವನದುದ್ದಕ್ಕೂ ಬಾಲ್ಯದ ನೆನಪುಗಳೇ ದಾರಿದೀಪ. ನಮ್ಮ ಪಾಲಿನ ಸವಿ ಸವಿ ನೆನಪಿನ ದಿನಗಳೇ ಬಾಲ್ಯದಲ್ಲಿ ಕಳೆದ ಸುಂದರ ಕ್ಷಣಗಳು!**

**■ ಕಲಾವತಿ ಹುಳೇಗಾರು**



ಎರಡೂವರೆ ವರ್ಷದ ನನ್ನ ಮೊಮ್ಮಗಳನ್ನು ಬೇಬಿ ಸಿಟ್ಟಿಂಗ್‌ಗೆ ಸೇರಿಸಿದರು. ಈಗಿನ ಕಾಲಕ್ಕೆ ಇದು ಅನಿವಾರ್ಯ. ಇದಕ್ಕೆ ಕಾರಣಗಳು ಅನೇಕ. ಈಗಿನದು ಅವಿಭಕ್ತ ಕುಟುಂಬವಲ್ಲ. ತಂದೆ ತಾಯಿ ಇಬ್ಬರೂ ಕೆಲಸಕ್ಕೆ ಹೋಗುವವರಾಗಿದ್ದರೆ ಮಕ್ಕಳನ್ನು ನೋಡಿಕೊಳ್ಳುವುದೇ ಸಮಸ್ಯೆ. ಇನ್ನೂ ಮುಖ್ಯ ಕಾರಣವೆಂದರೆ ಮಕ್ಕಳು ಒಂದನೇ ತರಗತಿಗೆ ಹೋಗುವಷ್ಟರಲ್ಲಿ ಅವರಿಗೆ ಇಂಗ್ಲಿಷ್ ಭಾಷೆ ಚೆನ್ನಾಗಿ ಬಂದಿರಬೇಕು.

ನಮ್ಮ ಬಾಲ್ಯವನ್ನು ನೆನಪಿಸಿಕೊಂಡಾಗ ಈಗಿನ ಮಕ್ಕಳ ಬಗ್ಗೆ ಮರುಕ ಉಂಟಾಗುತ್ತದೆ. ನಾವು ಚಿಕ್ಕವವರುವಾಗ ಎಲ್.ಕೆ.ಜಿ., ಯು.ಕೆ.ಜಿ ಎಲ್ಲ ಇರಲಿಲ್ಲ. ಐದು ವರ್ಷ ಆಗುತ್ತಿದ್ದಂತೆ ನೇರವಾಗಿ ಒಂದನೇ ತರಗತಿಗೆ ಸೇರಿಸುತ್ತಿದ್ದರು. ಅಷ್ಟರಲ್ಲಾಗಲೇ ನಮಗೆ ಮನೆಯಲ್ಲೇ ಅಕ್ಷರ ಮಗ್ಗಿ, ಶ್ಲೋಕ, ಭಜನೆ ಇವುಗಳ ಪಾಠ ತಕ್ಕಮಟ್ಟಿಗೆ ಆಗಿರುತ್ತಿತ್ತು.

ಶಾಲೆಗೆ ಹೋಗಲು ಪ್ರಾರಂಭಿಸಿದ ಮೇಲೂ ನಮಗೆ ಧಾವಂತವಿರುತ್ತಿರಲಿಲ್ಲ. ಬೆಳಗಾದ ನಂತರ ಎದ್ದರೂ ದೇವರಿಗೆ ಹೂ ಕೊಯ್ಯುವುದು ಮುಂತಾದ ಸಣ್ಣಪುಟ್ಟ ಕೆಲಸಗಳನ್ನು ಮಾಡಿ ನಿಧಾನವಾಗಿ ಸ್ನಾನ ತಿಂಡಿ ಮುಗಿಸಿ ಶಾಲೆಗೆ ಹೊರಡುತ್ತಿದ್ದೆವು. ಈಗಿನಂತೆ ಮಣ ಭಾರದ ಪುಸ್ತಕಗಳಿಲ್ಲ ಸಮವಸ್ತ್ರದ ರಗಳೆಯಿಲ್ಲ. ನಡೆದೇ ಹೋಗುವಷ್ಟು ದೂರದಲ್ಲಿನ ಶಾಲೆ. ಬೆಳಿಗ್ಗೆ ಹತ್ತರಿಂದ ಸಂಜೆ ನಾಲ್ಕರವರೆಗೆ ಶಾಲಾ ಸಮಯ. ಬಹಳಷ್ಟು ಕಡೆಗಳಲ್ಲಿ ಮಧ್ಯಾಹ್ನವೂ ಊಟಕ್ಕೆ ಮನೆಗೆ ಬಂದು ಹೋಗಬಹುದಿತ್ತು. ಸಂಜೆ ಶಾಲೆಯಿಂದ ಬಂದ ನಂತರ ಕಾಫಿ ತಿಂಡಿ ಮುಗಿಸಿ ಆಡಲು ಹೋದರೆ ಬರುವುದು ಕತ್ತಲಾದ ಮೇಲೆಯೇ. ಮನೆಗೆ ಬಂದವರೇ ಕಾಲು ತೊಳೆದು ದೇವರಿಗೆ ನಮಸ್ಕರಿಸಿ ನಂತರ ದೇವರ ಶ್ಲೋಕ, ಮಗ್ಗಿ ಹೇಳುತ್ತಿದ್ದೆವು.

ಸಾಮಾನ್ಯವಾಗಿ ಎಲ್ಲ ಮಕ್ಕಳಿಗೂ ನಮ್ಮ ಹಿಂದೂ ಪಂಚಾಂಗದಂತೆ ದಿನ, ವಾರ, ತಿಥಿ, ನಕ್ಷತ್ರ, ಸಂವತ್ಸರ ಇವೆಲ್ಲಾ ಬಾಯಿಪಾಠವಾಗಿರುತ್ತಿತ್ತು. ಇವನ್ನೆಲ್ಲಾ ಹೇಳುತ್ತಿದ್ದೆವು. ಇದನ್ನೂ ಸಹ ಕೆಲವೊಮ್ಮೆ ಏನಾದರೂ ಸಣ್ಣಪುಟ್ಟ ಕೆಲಸ ಮಾಡುತ್ತಾ ಹೇಳಿಕೊಳ್ಳುತ್ತಿದ್ದೆವು. ಇವುಗಳ ನಡುವೆ ಕೇವಲ ಒಂದೆರಡು ಪುಟಗಳಷ್ಟು ಇರುತ್ತಿದ್ದ ಹೋಮ್ ವರ್ಕ್ ಮಾಡಿ ಮುಗಿಸುತ್ತಿದ್ದೆವು. ನಾನಿದ್ದುದು ತಾಲೂಕು ಕೇಂದ್ರವಾಗಿದ್ದರಿಂದ ತೋಟದ ಕೆಲಸ ಅಷ್ಟಾಗಿ ಗೊತ್ತಿರಲಿಲ್ಲ. ಆದರೆ ಮಲೆನಾಡಿನ ಹಳ್ಳಿಯಲ್ಲಿನ ಮಕ್ಕಳಿಗೆ ಬೆಳಿಗ್ಗೆ ತೋಟಕ್ಕೆ ಹೋಗಿ ಅಡಿಕೆ ಆರಿಸುವುದು ಸಂಜೆ ಅಡಿಕೆ ಸುಲಿಯುವುದೂ ಇರುತ್ತಿತ್ತು.

ಆಗೆಲ್ಲಾ ಹೆಚ್ಚಾಗಿ ಅವಿಭಕ್ತ ಕುಟುಂಬವೇ ಆಗಿದ್ದರಿಂದ ಮನೆಯಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿರುತ್ತಿತ್ತು. ಮನೆಯ ಯಜಮಾನನ ಮಕ್ಕಳ ವಯಸ್ಸಿನವರೇ ಆದ ಮೊಮ್ಮಕ್ಕಳೂ ಇರುತ್ತಿದ್ದರು. ಆ ಮಕ್ಕಳ ಮಧ್ಯೆ ಆರೋಗ್ಯಕರ ಪೈಪೋಟಿಯೂ ಇರುತ್ತಿತ್ತು. ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆ ಹತ್ತಿರವೇ ಇದ್ದರೂ ನಂತರದ ತರಗತಿಗಳಿಗೆ ಎರಡು ಮೂರು ಕಿ.ಮೀ. ನಡೆದೇ ಹೋಗಬೇಕಿತ್ತು. ಆಗ ದಾರಿಯುದ್ದಕ್ಕೂ ಆಯಾ ಋತುವಿನಲ್ಲಿ ಬಿಡುವ ಕಾಯಿ ಹಣ್ಣು ಗಳನ್ನು ಕಿತ್ತು ತಿನ್ನುತ್ತಾ ಆರಾಮಾಗಿ ಮನೆಗೆ ಬರಬಹುದಿತ್ತು. ದಸರಾ ಬೇಸಿಗೆ ರಜೆಯಲ್ಲಂತೂ ನಮ್ಮನ್ನು ಹಿಡಿಯುವವರೇ ಇಲ್ಲ. ಅಜ್ಜಿಯ ಮನೆಗೋ ಅಥವಾ ಹತ್ತಿರದ ನೆಂಟರ ಮನೆಗೋ ಹೋದರೆ ಶಾಲೆ ಪ್ರಾರಂಭವಾಗುವ ಹಿಂದಿನ ದಿನದವರೆಗೂ ಬರುತ್ತಿರಲಿಲ್ಲ. ಇನ್ನೂ ತಮಾಷೆಯ ಸಂಗತಿಯೆಂದರೆ ಶಾಲಾ ದಿನಗಳಲ್ಲಿ ಅಮ್ಮನ ಜೊತೆಗೆ ಅಜ್ಜಿಯಮನೆ ಅಥವಾ ಹತ್ತಿರದ ಬಂಧುಗಳ ಮನೆಗೆ ಹೋದಾಗ ಅವರ ಮನೆಯ ಮಕ್ಕಳೊಡನೆ ಅವರ ಶಾಲೆಗೂ ಹೋಗುತ್ತಿದ್ದೆವು. ಹೀಗೆ ನಮ್ಮ ಬಾಲ್ಯ ಆಡಾಡುತ್ತಾ ಕಳೆಯುತ್ತಿತ್ತು.

ನಾವು ಚಿಕ್ಕವರಿದ್ದಾಗ ತೇರ್ಗಡೆಯಾಗಿ ಮುಂದಿನ ತರಗತಿಗೆ ಹೋದರೆ ಸರಿ ಎಂಬ ಭಾವನೆ ಇತ್ತು. ಈಗಲಾದರೋ ಒಳ್ಳೆಯ ಅಂಕ ಪಡೆಯಲೇಬೇಕು. ರ್‍ಯಾಂಕ್ ಬರಲೇಬೇಕು ಎಂಬುದು ಮಕ್ಕಳ ಮೇಲೆ ಇನ್ನಷ್ಟು ಒತ್ತಡ ಹೇರುತ್ತದೆ. ಇದನ್ನೆಲ್ಲಾ ನೋಡಿದಾಗ ಈಗಿನ ಮಕ್ಕಳ ಬಗ್ಗೆ ಮರುಕವುಂಟಾಗುತ್ತದೆ. ಇದನ್ನೆಲ್ಲಾ ನೋಡಿದಾಗ ನಮ್ಮ ಬಾಲ್ಯವೇ ಚಂದ ಎನ್ನಿಸದಿರದು. ಬಾಲ್ಯದ ನೆನಪುಗಳನ್ನು ಮೆಲುಕು ಹಾಕುವುದರಲ್ಲಿ ಅದೆಷ್ಟು ಸಮಾಧಾನ, ಖುಷಿ, ಸಂತೃಪ್ತಿ. ಮರುಕಳಿಸದೇ ಬಾಲ್ಯ? ■